ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ನಂ.8,
ಎಂ.ಎಸ್.ಬಿ-1, 6 ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು
ದೂರವಾಣಿ ಸಂಖ್ಯೆ: 080-22283366, 22204466, 22265755
ಇ-ಮೇಲ್: ed.kreis@ka.gov.in

## ಪ್ರಕಟಣೆ

ಸಂಖ್ಯೆ:ಕವಶಿಸಸ/ಆಡಳಿತ/ಹೊನೇ/ಸಿ.ಆರ್-1/2020-21 ದಿನಾಂಕ: 10 / 02 /2022

**ವಿಷಯ:** ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್/ರಿಟ್ ಅಪೀಲುಗಳ ತೀರ್ಪುಗಳಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ, ಅಧೀನದ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ಪರಿಗಣಿಸಿ, ಆಯ್ಕೆಗೆ ಅರ್ಹರಾದ ಅಭ್ಯರ್ಥಿಯ ಅಂತಿಮ ಆಯ್ಕೆಪಟ್ಟಿಯ ಪ್ರಕಟಣೆ ಕುರಿತು.

**ಉಲ್ಲೇಖ:**
1. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 20204-20364/2011 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:13/07/2012.
2. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 5127/2012 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:28.2.2013 ಮತ್ತು ರಿಟ್ ಅರ್ಜಿ ಸಂಖ್ಯೆ: 958-988/2015, ದಿ: 12/02/2015
3. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ, ಧಾರವಾಡ ಪೀಠದ ಮೇಲ್ಮನವಿ ಅರ್ಜಿ ಸಂಖ್ಯೆ: 31346/2012 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ: 21/03/2013.
4. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 113076/2014 ಮತ್ತು ಸಂಯೋಜಿತ ರಿಟ್ ಅರ್ಜಿಗಳಾದ 100572/2015 ಮತ್ತು 100573-582/2015, ದಿ: 21/01/2015.
5. ಸರ್ಕಾರದ ಪತ್ರ ಸಂಖ್ಯೆ: ಸಕಇ 472 ಮೊದೇಶಾ 2021 ದಿನಾಂಕ: 02.11.2021
6. ಸರ್ಕಾರದ ಪತ್ರ ಸಂಖ್ಯೆ: ಸಕಇ 472 ಮೊದೇಶಾ 2021 ದಿನಾಂಕ: 07.01.2022
7. ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ:ಕವಶಿಸಸ/ಆಡಳಿತ/ಹೊನೇ/ಸಿ.ಆರ್-67/2013-14 ದಿನಾಂಕ: 27/01/2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಉಲ್ಲೇಖ (1) ರಿಂದ (4)ರ ವರೆಗಿನ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯಗಳ ತೀರ್ಪುಗಳನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರ



ನಂ. 8, ಎಂ.ಎಸ್.ಬಿ-1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : ed.kreis@ka.gov.in, Website : www.kreis.kar.nic.in

ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿ ವತಿಯಿಂದ/ಜಿಲ್ಲಾ ಪಂಚಾಯಿತಿಯಿಂದ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ನೀಡಿ, ಖಾಯಂಗೊಳಿಸುವ ಸಂಬಂದ ಉಲ್ಲೇಖ (5) ರಂತೆ ಸದರಿ ಅಭ್ಯರ್ಥಿಯ ದಾಖಲೆಗಳನ್ನು ಪುನರ್ ಪರಿಶೀಲನೆ ನಡೆಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ ಉಲ್ಲೇಖ (6)ರಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ. ಈ ಹಿನ್ನಲೆಯಲ್ಲಿ ಈ ಕೆಳಕಂಡ ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಮುಂದುವರೆದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖ(7)ರಲ್ಲಿ ಪ್ರಕಟಿಸಿ, 07 ದಿನಗಳೊಳಗಾಗಿ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಈ ಪಟ್ಟಿಗೆ ಸಂಬಂದಿಸಿಂತೆ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ, ಆದ್ದರಿಂದ ಈ ಕೆಳಗೆ ತಿಳಿಸಿರುವ ನಿಬಂಧನೆಗಳಿಗೊಳಪಟ್ಟು ಈ ಕೆಳಕಂಡ ಅಭ್ಯರ್ಥಿಯ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

**ಹುದ್ದೆ: ಹಿಂದಿ ಭಾಷಾ ಸಹ ಶಿಕ್ಷಕರು**

| ಕ್ರ ಸಂ | ಅಭ್ಯರ್ಥಿಯ ಹೆಸರು | ಹುದ್ದೆ | ನೊಂದಣಿ ಸಂಖ್ಯೆ | ವರ್ಗ | ಸಿ.ಸಿ.ಇ ಅಂಕ | ಸೇವಾ ಕೃಪಾಂಕಕ್ಕೆ ಪರಿಗಣಿಸಿದ ವರ್ಷಗಳು | ಪರಿಗಣಿಸಿದ ಸೇವಾ ಕೃಪಾಂಕ | ಒಟ್ಟು ಅಂಕಗಳು | ವರ್ಗವಾರು ಕಟ್ ಆಫ್ ಅಂಕಗಳು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಶ್ರೀ ಅಕಾನಬಾದಶಾ ಎ ಮೊಕಾಶಿ | ಹಿಂದಿ ಭಾಷಾ ಸಹ ಶಿಕ್ಷಕರು | 266082 | 2ಬಿ | 57.05 | 1 | 5 | 63.05 | 61.39 |

ನಿಬಂಧನೆಗಳು:-

1. ಈ ಆಯ್ಕೆಪಟ್ಟಿಯು ಭವಿಷ್ಯದಲ್ಲಿ ಬರಬಹುದಾದ ಮಾನ್ಯ ಉಚ್ಚ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೊಳಪಟ್ಟಿರುತ್ತದೆ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗಗಳು, ಯೋಜನಾ ನಿರಾಶ್ರಿತರು, ಅಂಗವಿಕಲರು, ಕನ್ನಡ ಮಾಧ್ಯಮ, ಗ್ರಾಮೀಣ ಪ್ರದೇಶದ ಅಭ್ಯರ್ಥಿ, ಮಾಜಿ ಸೈನಿಕ ಮುಂತಾದ ಮೀಸಲಾತಿಯ ಪರಿಗಣನೆಗೆ ಅಭ್ಯರ್ಥಿಯುಸಲ್ಲಿಸಿರುವ ಪ್ರಮಾಣ ಪತ್ರಗಳು ಸಂಬಂಧಪಟ್ಟ ಜಿಲ್ಲಾ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದನಂತರ ಅಂಗೀಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಈ ಅಭ್ಯರ್ಥಿಯ ನಡತೆ ಹಾಗೂ ಪೂರ್ವಚರಿತ್ರೆಗೆ (Character and Antecedents) ಸಂಬಂಧಿಸಿದಂತೆ Police Verification ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
4. ಈ ಅಭ್ಯರ್ಥಿಯ ಶೈಕ್ಷಣಿಕ ಮೂಲದಾಖಲಾತಿಗಳ ನೈಜತೆ ಪರಿಶೀಲನೆ ಸಮಯದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.
5. ಸೇವಾ ಕೃಪಾಂಕ ಪರಿಗಣನೆಗಾಗಿ ಅಭ್ಯರ್ಥಿಯು ಸಲ್ಲಿಸಿರುವ ನೇಮಕಾತಿ ಆದೇಶ, ಹಾಜರಾತಿ ವಹಿ, ವೇತನ ಬಟವಾಡೆ ವಿವರಗಳು, ವಯೋಮಾನಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇನ್ನಿತರ ಸೇವಾ ದಾಖಲಾತಿಗಳು ಭವಿಷ್ಯದಲ್ಲಿ ನೈಜವಲ್ಲವೆಂದು ಕಂಡುಬಂದಲ್ಲಿ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ,

ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು ಹಾಗೂ ಪಾವತಿಸಿದ ವೇತನವನ್ನು ವಸೂಲುಮಾಡಲಾಗುವುದು.

6. ಈ ಅಭ್ಯರ್ಥಿಯ ವೈದ್ಯಕೀಯ ದೇಹದಾರ್ಢ್ಯತೆ ಪ್ರಮಾಣ ಪತ್ರವನ್ನು ಜಿಲ್ಲಾ ವೈದ್ಯಾಧಿಕಾರಿ/ಜಿಲ್ಲಾ ಸರ್ಜನ್ ಶ್ರೇಣಿಯ ಅಧಿಕಾರಿಗಳಿಂದ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.